# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 160/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ತಿಮ್ಮನಾಯಕ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ರಾಮನಾಯಕ | | **05.04.2024** |
| **ವಯಸ್ಸು** | ಃ **30** ವರ್ಷ | | |
| **ವೃತ್ತಿ** | ಃ ಪೆಂಟ್ ಕೆಲಸ | **ಪ್ರಾ.ಸಾ.** | ಃ **07** |
| **ವಾಸಸ್ಥಳ** | ಃ ದೊಡ್ಡಕುಂಚೆವು, ಹೊಳೇನರಸಿಪುರ ತಾಲೂಕು | **ಚಾ.ಸಾ.** | ಃ **09** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ್ಗೆ ಅಂದಾಜು *2* ವರ್ಷಗಳ ಹಿಂದೆ ಮೈಸೂರಿನ ಕೆ.ಆರ್. ಆಸ್ಪತ್ರೆಯ ಪಕ್ಕದಲ್ಲಿ ಪೋ.ಠಾಣೆ ಯಲ್ಲಿ ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ಒಟ್ಟು *4* ದಾಖಲೆಗಳಿಗೆ ನನ್ನ ಸಹಿ ಪಡೆದಿದ್ದಾರೆ. ಆ ಕಾಲಕ್ಕೆ ಯಾವ ಕಾರಣಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದು ನನಗೆ ಹೇಳಿರಲಿಲ್ಲ. ಆ ಸಹಿ ಪಡೆದ ಕಾಲಕ್ಕೆ ನನ್ನನ್ನು ಬೇರೆ ಯಾವ ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ. ನನ್ನ ಸಹಿ ಪಡೆಯುವ ಕಾಲಕ್ಕೆ ಸೋಮಶೇಖರ್ ಎನ್ನುವವರು ಹಾಜರು ಇರಲಿಲ್ಲ. ಈಗ ನಾನು ನೋಡುತ್ತಿರುವ *2* ನೋಟೀಸ್ ಮತ್ತು *2* ಮಹಜರ್ ಗಳಲ್ಲಿ ನನ್ನ ಸಹಿಗಳು ನನ್ನವೇ ಇದ್ದು ಆ ಎಲ್ಲಾ ಸಹಿಗಳನ್ನು ಪೋ.ಠಾಣೆ ಯಲ್ಲಿ ಪಡೆದಿದ್ದಾರೆ. ಸಹಿ ಪಡೆದ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡೆದಿಲ್ಲಾ. ಸದರಿ ನೋಟಿಸಗಳು ಮತ್ತು ಮಹಜರ್ ಗಳನ್ನು ನಿಪಿ *10* ರಿಂದ *13* ಮತ್ತು ಸಹಿಗಳನ್ನು *10* (ಎ) ರಿಂದ *13*(ಎ) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

. ದಿಃ *08.07.2022* ರಂದು ನನಗೆ ಬೆ. *9.00* ಗಂಟೆಗೆ ಪೋ.ಠಾಣೆ ಗೆ ಬರುವಂತೆ ನೋಟೀಸ್ ಕೊಟ್ಟಿದ್ದರು ಎಂದರೆ ಸಹಿ ಪಡೆದಿದ್ದಾರೆ ಆದರೆ ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಆ ದಿನ ನನ್ನನ್ನು ಮತ್ತು ಪೋಲಿಸರನ್ನು ಸೋಮಶೇಖರ ಎನ್ನುವ ವ್ಯಕ್ತಿ ಮೈಸೂರಿನ ಅಂಬೇಡ್ಕರ್ ಜ್ಞಾನಲೋಕ್ ದಲ್ಲಿರುವ ಜೆ.ಎನ್ ನರ್ಮ ಬ್ಲಾಕ್ ನಂ. *7,* ಮನೆ ನಂ. ಎಸ್.*3* ರಲ ಬಳಿ ಕರೆದುಕೊಂಡು ಹೋಗಿ ಆ ಮನೆಯಲ್ಲಿ ಫ್ರೀಜ್ ನಲ್ಲಿ ಇಟ್ಟಿದ್ದ ಮೊಬೈಲ್ ಅನ್ನು ಹಾಜರು ಪಡಿಸಿದ್ದ ಎಂದರೆ ಆ ಮನೆಯ ವರೆಗೆ ಕರೆದುಕೊಂಡು ಹೋಗಿದ್ದು ನಿಜ ಆದರೆ ನಮ್ಮನ್ನು ಜೀಪ್ ನಲ್ಲಿ ಕುರಿಸಿ ಪೊಲೀಸರು ಮನೆಯ ಒಳಗೆ ಹೋಗಿ ಏನ್ನನ್ನೊ ಬರೆದುಕೊಂಡು ಬಂದು ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ನನಗೆ ಮೊಬೈಲ್ ಅನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಆ ಮೊಬೈಲ್ ಅನ್ನು ಜಪ್ತಿ ಮಾಡಿ ನಿಪಿ *7* ರಂತೆ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ ದೇವರಾಜ ಪೋ.ಠಾಣೆ ಯ ಮುಂಭಾಗದಲ್ಲಿ ಶಶಿಧರ ಎನ್ನುವವರು ಪೋ.ಠಾಣೆಯ ಮುಂಭಾಗದಲ್ಲಿ ಕೆಎ *09-ಬಿ-0929* ಸಂಖ್ಯೆ ಕಾರನ್ನು ಹಾಜರು ಪಡಿಸಿದಾಗ ಆ ಕಾರನ್ನು ವಶಕ್ಕೆ ಪಡೆದು ನಿಪಿ *13*ರಂತೆ ಮಹಜರ್ ಬರೆದು ಮಹಜರ್ ಗೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರು ಪೋಟೊಗಳಲ್ಲಿ ಕಾಣುವ ಕಾರನ್ನು ಆ ದಿನ ಅಮಾನತ್ತು ಪಡೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1** ಮತ್ತು **2** ನೇ **ಆರೋಪಿ ಪರ** ಏನು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**